## ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 40 ಗ್ರಾಪಂಅ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:12-06-2018.

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
ಬೆಂಗಳೂರು.

ಇವರಿಗೆ:

ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು,
ಎಲ್ಲಾ ಜಿಲ್ಲಾ ಪಂಚಾಯತ್‌ಗಳು.

ಮಾನ್ಯರೆ,

ವಿಷಯ: ಅವಿಶ್ವಾಸ ನಿರ್ಣಯ ಮಂಡನೆಗೆ ಸಂಬಂಧಿಸಿದ ರಿಟ್ ಅಪೀಲು ಸಂಖ್ಯೆ: 17140/2018 ಮತ್ತು 17461/2018 ಹಾಗೂ ಇತರೆ ಸಂಬಂಧಿಸಿದ ಪ್ರಕರಣಗಳಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ಮಧ್ಯಂತರ ಆದೇಶದ ಬಗ್ಗೆ.

ಉಲ್ಲೇಖ:
1) ರಿಟ್ ಅಪೀಲು ಸಂಖ್ಯೆ: 17140/2018 ಮತ್ತು 17461/2018 ಹಾಗೂ ಇತರೆ ಸಂಬಂಧಿಸಿದ ಪ್ರಕರಣಗಳು.
2) ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 40 ಗ್ರಾಪಂಅ 2018, ದಿನಾಂಕ:17-04-2018.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:05-03-2018 ಹಾಗೂ 08-03-2018ರಲ್ಲಿ ನೀಡಿರುವ ಮಧ್ಯಂತರ ಆದೇಶವನ್ನು ಪ್ರಸ್ತಾಪಿಸಿ ಅದರಂತೆ ಕ್ರಮ ಕೈಗೊಳ್ಳಲು ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಉಲ್ಲೇಖ(2)ರಲ್ಲಿನ ಸುತ್ತೋಲೆಯಲ್ಲಿ ನಿರ್ದೇಶನ ನೀಡಲಾಗಿತ್ತು. ಆದಾಗ್ಯೂ ಕೆಲವೊಂದು ಗ್ರಾಮ ಪಂಚಾಯತಿಗಳಲ್ಲಿ ದೈನಂದಿನ ಚಟುವಟಿಕೆಗಳಿಗೆ ಅವಶ್ಯಕವಾಗಿರುವ ಹಣಕಾಸನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳದಿರುವುದರಿಂದ ಕುಡಿಯುವ ನೀರಿನ ನಿರ್ವಹಣೆ, ಕೂಲಿ ಪಾವತಿ ಹಾಗೂ ಗ್ರಾಮ ಪಂಚಾಯತಿ ಸಿಬ್ಬಂದಿಗಳಿಗೆ ವೇತನ ಪಾವತಿಸದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ ಹಾಗೂ ಈ ಬಗ್ಗೆ ದಿನಾಂಕ: 05-06-2018 ನಡೆದ ವಿಚಾರಣೆಯ ವೇಳೆ ಮಾನ್ಯ ನ್ಯಾಯ ಪೀಠದಿಂದ ಮತ್ತಷ್ಟು ಸ್ಪಷ್ಟತೆಯನ್ನು ಕೋರಲಾಗಿತ್ತು. ಮಾನ್ಯ ನ್ಯಾಯ ಪೀಠವು ದೈನಂದಿನ ವ್ಯವಹಾರಗಳಲ್ಲಿ ಹಣಕಾಸಿನ ವ್ಯವಹಾರವು ಒಳಗೊಂಡಿದ್ದರೆ, ಅಂಥಹ ವೆಚ್ಚಗಳನ್ನು ಭರಿಸಬಹುದು ಎಂದು ಆದೇಶಿಸಿದೆ. ಆದ ಕಾರಣ ರಿಟ್ ಅರ್ಜಿಗಳಲ್ಲಿ ಮತ್ತು ರಿಟ್ ಅಪೀಲುಗಳಲ್ಲಿ ಒಳಗೊಂಡಿರುವ ಗ್ರಾಮ ಪಂಚಾಯತಿಗಳು ಕೆಳಕಂಡಂತೆ ಕ್ರಮ ಕೈಗೊಳ್ಳಲು ಮತ್ತೊಮ್ಮೆ ಸ್ಪಷ್ಟೀಕರಿಸಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

"ಗ್ರಾಮ ಪಂಚಾಯತಿಗಳ ಹಿಂದಿನ ಅಧ್ಯಕ್ಷರುಗಳು ಅಂದರೆ ಈಗ ನ್ಯಾಯಾಲಯದಲ್ಲಿ ಪ್ರಶ್ನಿತವಾಗಿರುವ ಅವಿಶ್ವಾಸ ನಿರ್ಣಯ ಮಂಡನೆ/ಅಂಗೀಕಾರದ ಅವಧಿಯಲ್ಲಿದ್ದ ಅಧ್ಯಕ್ಷರುಗಳು ಗ್ರಾಮ ಪಂಚಾಯತಿಗಳ ದೈನಂದಿನ ಕಾರ್ಯಗಳಿಗೆ ಸಂಬಂಧಿಸಿದಂತೆ ನಿರ್ಧಾರ ಕೈಗೊಳ್ಳಬಹುದು ಹಾಗೂ ದೈನಂದಿನ ವೆಚ್ಚವನ್ನು ಭರಿಸಲು ಅವಕಾಶವಿರುತ್ತದೆ. ದೈನಂದಿನ ವೆಚ್ಚದಲ್ಲಿ ಕುಡಿಯುವ ನೀರಿನ ತುರ್ತು ನಿರ್ವಹಣೆ, ಸಿಬ್ಬಂದಿಗಳ ಮಾಸಿಕ ವೇತನ ಪಾವತಿ, ಹಿಂದಿನ ಅವಧಿಯ ದೈನಂದಿನ ವೆಚ್ಚಗಳಿಗೆ ಸಂಬಂಧಿಸಿದ ಬಿಲ್‌ಗಳ ಪಾವತಿ, ಕೂಲಿಕಾರ್ಮಿಕರ ಕೂಲಿ ಪಾವತಿ ಮುಂತಾದ ಅತಿ ಅವಶ್ಯಕ ವೆಚ್ಚಗಳು ಸೇರಿರುತ್ತವೆ. ಅಂತಹ ಅಧ್ಯಕ್ಷರುಗಳು, ಗ್ರಾಮ ಪಂಚಾಯತಿಯಲ್ಲಿ ಅವಶ್ಯವಿದ್ದರೆ ಸಭೆಗಳನ್ನು ನಡೆಸಬಹುದಾಗಿದೆ. ಆದರೆ ಅಂತಹ ಸಭೆಗಳಲ್ಲಿ ಯಾವುದೇ ಹೊಸ ವೆಚ್ಚಗಳಿಗೆ ಸಂಬಂಧಿಸಿದ ಕ್ರಿಯಾ ಯೋಜನೆಗಳು ಸೇರಿದ್ದರೆ ಅಂಥಹ ಪ್ರಸ್ತಾವನೆಗಳಿಗೆ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮೋದನೆ ಪಡೆದುಕೊಳ್ಳುವುದು. ಈ ಮಾರ್ಗಸೂಚಿಯು ಮಾನ್ಯ ಉಚ್ಚ ನ್ಯಾಯಾಲಯದ ಅಂತಿಮ ಆದೇಶದವರೆಗೆ ಜಾರಿಯಲ್ಲಿರುತ್ತದೆ."

12/6/18

(ಎಂ.ಕೆ. ಕೆಂಪೇಗೌಡ)
ನಿರ್ದೇಶಕರು(ಪಂ.ರಾಜ್-1) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿ: ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ,-

1) ರಾಜ್ಯದ ಎಲ್ಲಾ ಕಂದಾಯ ಉಪವಿಭಾಗಾಧಿಕಾರಿಗಳು.
2) ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು.
3) ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು,